ಎಷ್ಟು ಒಳ್ಳೆಯವಳೇ ನೀನು! ಈಗ ನೌಕರಿಗಾಗಿ ದೂರದೂರಿಗೆ ಹೊರಟಾಗ, ಎಲ್ಲ ಲಗ್ಗೇಜುಗಳನ್ನು ಒಳಗಿಟ್ಟು, ಟಿಕೇಟು ಕಿಸೆಯಲ್ಲೇ ಇದೆ ಎಂದು ಖಾತ್ರಿಪಡಿಸಿಕೊಂಡು ಪ್ಲಾಟ್‌ಫಾರಂನಲ್ಲೇ ನಿಂತುಬಿಟ್ಟೆಯಲ್ಲೇ ನಿರ್ಲಿಪ್ತವಾಗಿ ನೀರ ಕೆನ್ನೆಯವಳೇ, ಹೇಳೇss ಇಷ್ಟೇನೇ ನಮ್ಮ ಸಂಬಂಧ! ಎಲ್ಲಿ ಹೋಗಲೇ ಈಗ? ಎಷ್ಟೆಲ್ಲ ದೂರ! ಬೊಗಸೆ ತುಂಬ ಬದುಕ ತೋರಿಸಿ, ಈಗ ಬೇವಾರ್ಸಿಯಂತೆ ಹೋಗಲು ಬಿಡುತ್ತಿದ್ದಿಯಲ್ಲೇ ಕೋಮಲ ಕೈಯವಳೇ. ಪುಟಗಟ್ಟಲೆ ಪ್ರಶ್ನೆಗಳು ಪಟಪಟನೆ ಕೇಳುವವಳೆ ಇಂತಹ ದುರ್ದಿನಗಳ ಬಗ್ಗೆ ಯಾಕೆ ಕೇಳಲಿಲ್ಲ? ಮನದ ತುಂಬ ಉಸಿರು ತುಂಬಿ ಈಗ್ಯಾಕೆ ಆಕಳಿಸುತ್ತಾ ನಿಂತು ಬಿಟ್ಟೀ? ಸುರು ಸುರು ಸಿಂಬಳವ ನನ್ನ ಕರ್ಚೀಫಿನಲ್ಲಿ ಸಶಬ್ದವಾಗಿ ಸುರಿದು ಪುನಃ ನನ್ನ ಕಿಸೆಗೆ ನೀ ತುರುಕಿದ್ದನ್ನು ಸಹಿಸಿದ್ದು, ನೀ ನನಗೆ ಇಷ್ಟವೆಂದು ಕಣೆ! ಮನದ ತುಂಬ ಮೋಡ ಕವಿದಾಗ 'ಮುತ್ತು ಹನಿ, ಹನಿಸಿ ಮುದಗೊಳಿಸುತ್ತಿದ್ದಿಯಲ್ಲೇ ಮುದುಕಿ! ಕನ್ನಡಶಾಲೆಯ ದಿನಗಳಲ್ಲಿ ಮಾಸ್ತರರು, ಬೆಂಚಿನ ಮೇಲೆ ನಿಲ್ಲಿಸಿ ಮಗ್ಗಿ ಹೇಳಿಸಿದಂತೆ ನನ್ನಿಂದ ಎಲ್ಲ ಒದರಿಸಿಬಿಡೇ!... ಒಮ್ಮೆ, ಒಂದೇ ಒಂದು ಸಲ ಹೇಳಿಬಿಡೆ ಹೋಗಬೇಡವೆಂದು! ಎಲ್ಲವನ್ನೂ ಬೋಗಿಯಲ್ಲೇ ಬಿಟ್ಟು ನಿನ್ನೆದುರು ನಿಂತು ಬಿಡುವುದಿಲ್ಲವೋ ನೋಡು, ಎತ್ತೆತ್ತಲೋ ನೋಡುತ್ತ ಕಣ್ಣು ತಪ್ಪಿಸುತ್ತಿದ್ದಿಯಲ್ಲೇ ರಂಗೋಲಿ ತುಟಿಯವಳೇ... ನಿನ್ನ ಕನ್ನಡಕದ ಫ್ರೇಮನ್ನಾದರೂ ಮಾಡಿ ಮೂಗಿಗೇರಿಸಿಕೊಳ್ಳೆ! ಟ್ರೈನು ಹೊರಡುತ್ತಿದ್ದಂತೆ ನಿನ್ನ ಉದ್ದ ಜಡೆ ಹಿಡಿದು ಲಗ್ಗೇಜ ಎಳೆದಂತೆ ಬೋಗಿಯೊಳಗೆ ಎಳೆದು, ಎದೆ ತುಂಬ ಅಪ್ಪಿಕೊಂಡರೆ ಏನೇ ಮಾಡುತ್ತೀ? ಹೇಳೇ... ಸಾಣೆಕಟ್ಟೆ ಉಪ್ಪಿನ ಬಣ್ಣದವಳೇ... ಮುಷ್ಟಿ ಮೈಥುನದುತ್ತುಂಗದ ದುಃಖವಾಗುತ್ತಿಯಲ್ಲೇ ಹುಡುಗೀ... ಇಳಿದು ನಿನ್ನ ಕೊರಳಿಗೆ ಜೋತು ಬಿದ್ದುಬಿಡುತ್ತೇನೆ ನೋಡುತ್ತಿರು...' ಎಂದುಕೊಳ್ಳುತ್ತಿರುವಾಗ ಟ್ರೈನು ಚಲಿಸಿದ್ದನ್ನು ಅರಿತು ಅವಳೆಡೆಗೆ ನೋಡಿದವನಿಗೆ ಕೈಮುಗಿದು ನಿಂತಿರುವವಳು ಕಂಡು– ಸುಸ್ತಾದವನಂತೆ ಕುಳಿತ.

**ಅವಳು**

'ಪೊಟ್ಲೆ ಕಟ್ಟಿ ಹೊರಟೇ ಬಿಟ್ಟೆಯಲ್ಲೋ ಸುಟ್ಟ ಬದನೆಕಾಯಿ ಮುಖದವನೆ... ಇದೇ ಏನೋ ಬದುಕು? ಮರೆತೆಯೇನೋ ಎಲ್ಲಾ. ನಿನ್ನ ಜೇನಕಣ್ಣ ಆಳ ನೋಡಿದ್ದು ಟಾಟಾ ಹೇಳಲಲ್ಲವೋ, ನಿನ್ನ ಕೂದಲು ಕೆದರಿದ್ದು ಹೇನ ಹೆಕ್ಕಲಲ್ಲವೋ, ನೀ ಕೊಟ್ಟ ಹೂವ ಮುಡಿದಿದ್ದು ಹೂವ ಆಸೆಯಿಂದಲ್ಲವೊ ಗದ್ದೆಯಂತಹ ಎದೆಯವನೆ, ಹಸಿರು ಪೈರಾಗದೇನೋ ನಿನ್ನೆದೆಯ ರೋಮ! ಏನೂ ಹೇಳದೆ ಹಾಗೇ ಹರಿದು ತುಂಡಾದಂತೆ ಹೋದರೆ ಕಲ್ಲಾಗುವಿ ನೋಡು! ನನ್ನ ಜಡೆ ಇಷ್ಟವೆಂದು ಹೇಳಿ ಹೊರಟೇಬಿಟ್ಟೆಯಲ್ಲೋ ಹನುಮಂತನಂತೆ, ಕತ್ತರಿಸಿ ಕುತ್ತಿಗೆಗಾದರೂ ಕಟ್ಟಿಕೊಳ್ಳೋ! ತುಪತುಪನೆ ಸೈನ್ಸ್ ಕಲಿತಿದ್ದಿಯಲ್ಲೋ ಕಳ್ಳ, ಉಪಯೋಗಿಸೋ ನಿನ್ನ ಸೈನ್ಸ್. ಏss ಮಣಗಟ್ಟಲೇ ಸೆಮಿನಾರು ಸುರಿದವನೇ...

ಹೇಳೋss ಬಾಯಿಲ್ಲವೇನೋ, ಹೇಳೋ, 'ನೀನು ಬಂದುಬಿಡೆಂದು' ಬೋಗಿ ಹತ್ತಿ, ಲೈಬ್ರರಿಯ ದಪ್ಪ ದಪ್ಪ ಪುಸ್ತಕಗಳಂತೆ ಜಪ್ಪನೆ ಕುಳಿತುಬಿಟ್ಟೆಯಲ್ಲೋ, ಯಾರೋ ಓದುತ್ತಾರೆ ನಿನ್ನ?... ಮುಟ್ಟಿನ ದಿನಗಳ ಕಿಬ್ಬೊಟ್ಟೆ ನೋವಾಗುತ್ತಿದ್ದಿಯಲ್ಲೋ! ಸೈನ್ಸ್ ಕಲಿತಿದ್ದು ನೀ ಕಲಿಸುತ್ತಿದ್ದೀ ಎಂದೋ, ಕನಸು ಹಣೆದದ್ದು ನಿನ್ನ ಗಡ್ಡದೊಂದಿಗೋ ಗೆದ್ದಲು ಮುಖದವನೇ, ತೊಟ್ಟಿಲು ಕಟ್ಟಿದ್ದು, ನಿನ್ನ ತೋಳ ತುದಿಗೋ ತಾವರೆ ನಗೆಯವನೇ... 'ವಾಪಸ್ ಬರುತ್ತೇನೆ' ಎಂದಾದರೂ ಹೇಳೋ ಮೂದೇವಿ. ಬಾಯಿಲ್ಲವೇನೋ... ಇಲ್ಲೇ ಕಾಯುತ್ತೇನೋ, ಈ ಪ್ಲಾಟ್‌ಫಾರಂನಲ್ಲೇ ನಿಂತು ಶಬರಿಯೂ ನಾಚಿಕೊಳ್ಳುವಷ್ಟು ಹೊತ್ತು!'

**ಕತೆಗಾರ**

ಹೀಗೆ ಸರೋವರದಂತಹ ಆ ಗಡ್ಡದ ಹುಡುಗ ಮತ್ತು ಮುಚ್ಚಂಜೆಯಂತಹ ಕನ್ನಡಕದ